ಆ) ಇದರಿಂದ ಈ ಭಾಗದ ಕಬ್ಬು ಬೆಳೆಗಾರರಿಗೆ ತುಂಬಾ ನಷ್ಟವಾಗಿರುವುದು ನಿಜವೇ?

ಗುತ್ತಿಗೆದಾರರಾದ ಮೆ. ರೇಣುಕಾ ಶುಗರ್ಸ್‌ರವರು 2008–2009ನೇ ಸಾಲಿನಲ್ಲಿ ಕಾರ್ಖಾನೆಯ ಕಬ್ಬು ಮೀಸಲು ಕ್ಷೇತ್ರದಿಂದ 89000 ಮೆ.ಟನ್ ಕಬ್ಬನ್ನು ತೆಗೆದುಕೊಂಡು ಹೋಗಿ ತಮ್ಮ ಹವಳಗ ಘಟಕದಲ್ಲಿ ನುರಿಸಿರುವುದರಿಂದ ಕಬ್ಬು ಬೆಳೆಗಾರರಿಗೆ ನಷ್ಟವಾಗಿರುವುದಿಲ್ಲ.

ಇ) ಹಾಗಿದ್ದಲ್ಲಿ, ನಷ್ಟವಾಗಿರುವ ರೈತರಿಗೆ ಕಬ್ಬು ಬೆಳೆಗಾರರಿಗೆ ಪರಿಹಾರ ನೀಡಲು ಕೈಗೊಂಡಿರುವ ಕ್ರಮವೇನು?

ಉದ್ಭವಿಸುವುದಿಲ್ಲ.

302 ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್ (ಸೇಡಂ)
ಉಮೇಶ್ ವಿ.ಕತ್ತಿ(ತೋಟಗಾರಿಕೆ ಹಾಗೂ ಬಂಧಿಖಾನೆ ಸಚಿವರು)

ಅ) ಸೇಡಂ ಉಪ ವಿಭಾಗದ ಕಾರಾಗೃಹದ ಹೊಸ ಕಟ್ಟಡ ಪೂರ್ತಿಗೊಂಡಿರುವುದು ಸರಕಾರದ ಗಮನಕ್ಕೆ ಬಂದಿದೆಯೇ;

ಸೇಡಂ ತಾಲ್ಲೂಕು ಉಪ ಕಾರಾಗೃಹವು ಕಂದಾಯ ಇಲಾಖೆ ನಿಯಂತ್ರಣಕ್ಕೆ ಒಳಪಟ್ಟಿದ್ದು ಕಾರಾಗೃಹ ಇಲಾಖೆಯ ನಿಯಂತ್ರಣದಲ್ಲಿ ಇರುವುದಿಲ್ಲ. ಕಾರಾಗೃಹ ಇಲಾಕೆಯು ಸೇಡಂ ತಾಲ್ಲೂಕಿನಲ್ಲಿ ಉಪ ಕಾರಾಗೃಹದ ಹೊಸ ಕಟ್ಟಡವನ್ನು ನಿರ್ಮಾಣ ಮಾಡಿರುವುದಿಲ್ಲವಾದ್ದರಿಂದ ಸದರಿ ಕಾರಾಗೃಹವನ್ನು ಕಾರಾಗೃಹ ಇಲಾಖೆಯಿಂದ ಪ್ರಾರಂಭಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) ಹಾಗಿದ್ದಲ್ಲಿ, ಯಾವಾಗ ಪ್ರಾರಂಭಿಸಲಾಗುವುದು?

ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

152 ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ
ಕೃಷಿ ಸಚಿವರು

ಅ) ರಾಜ್ಯದಲ್ಲಿ ಪ್ರಸಕ್ತ ಸಾಲಿಗೆ ಅಗತ್ಯವಿರುವ ರಸಗೊಬ್ಬರ ಮತ್ತು ಬಿತ್ತನೆ ಬೀಜದ ಅಂದಾಜು ಪ್ರಮಾಣವೆಷ್ಟು; ಈಗ ದಾಸ್ತಾನಿರುವ ರಸಗೊಬ್ಬರ ಹಾಗೂ ಬಿತ್ತನೆ ಬೀಜದ ಪ್ರಮಾಣವೆಷ್ಟು; (ಜಿಲ್ಲಾವಾರು ವಿವರ ಒದಗಿಸುವುದು)

2009–10ನೇ ಸಾಲಿನ ಮುಂಗಾರು ಹಂಗಾಮಿಗೆ ಡಿ.ಎ.ಪಿ.–4,45,000 ಮೆ.ಟನ್. ಎಂ.ಒ.ಪಿ–2,90,000 ಮೆ.ಟನ್, ಕಾಂಪ್ಲೆಕ್ಸ್.–5,70,000 ಮೆ.ಟನ್ ಮತ್ತು ಯೂರಿಯಾ–8,00,000 ಮೆ.ಟನ್ ರಾಜ್ಯದಲ್ಲಿ ಒಟ್ಟು 21,05,000 ಮೆ.ಟನ್‌ಗಳಷ್ಟು ವಿವಿಧ ರಸಗೊಬ್ಬರಗಳ ಬೇಡಿಕೆ ಇರುತ್ತದೆ. 2009ರ ಮುಂಗಾರು ಹಂಗಾಮಿಗೆ